## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಲೆಕ್ಕ ಶೀರ್ಷಿಕೆ-3054 (ನಿರ್ವಹಣಾ ಅನುದಾನ)-ಟಾಸ್ಕ್‌ಪೋರ್ಸ್ ಅಡಿ 2017-18ನೇ ಸಾಲಿನ ಆರ್ಥಿಕ ವರ್ಷದಲ್ಲಿ ಗ್ರಾಮೀಣ ರಸ್ತೆಗಳ ನಿರ್ವಹಣೆ/ದುರಸ್ತಿಗೆ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ತಾಲ್ಲೂಕುವಾರು ಹಂಚಿಕೆ ಮಾಡಿದ ಅನುದಾನಕ್ಕೆ ಪ್ರತಿಯಾಗಿ **ದ್ವಿತೀಯ ಕಂತಿನ** ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:130:ಆರ್‌ಆರ್‌ಸಿ:17, ದಿನಾಂಕ: 05-05-2017.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:192:ಆರ್‌ಆರ್‌ಸಿ:2017, ದಿನಾಂಕ: 07-05-2017.

ಪ್ರಸ್ತಾವನೆ:

ಲೆಕ್ಕಶೀರ್ಷಿಕೆ-3054 (ನಿರ್ವಹಣಾ ಅನುದಾನ)-ಟಾಸ್ಕ್‌ಪೋರ್ಸ್ ಅಡಿ **2017-18**ನೇ ಸಾಲಿನ ಆರ್ಥಿಕ ವರ್ಷದಲ್ಲಿ ಗ್ರಾಮೀಣ ರಸ್ತೆಗಳ ದುರಸ್ತಿ/ನಿರ್ವಹಣೆಯ ಕಾಮಗಾರಿಗಳಿಗಾಗಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ರೂ.13038.73 ಲಕ್ಷಗಳನ್ನು ತಾಲ್ಲೂಕುವಾರು ಹಂಚಿಕೆ ಮಾಡಿ ಆಯಾ ತಾಲ್ಲೂಕಿನಲ್ಲಿ ರಚಿಸಲಾದ ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಪಡೆ ಆಯ್ಕೆ ಮಾಡಿದ ರಸ್ತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಂತೆ ಜಿಲ್ಲಾ ಪಂಚಾಯತಿಗಳಿಗೆ ಸೂಚಿಸಿ ಮಾರ್ಗಸೂಚಿಯೊಂದಿಗೆ ಮೇಲೆ ಓದಲಾದ-1 ರಂತೆ ಆದೇಶ ಹೊರಡಿಸಲಾಗಿದೆ.

ಸದರಿ ಆದೇಶದಂತೆ 2017-18ನೇ ಸಾಲಿನಲ್ಲಿ ಟಾಸ್ಕ್‌ಪೋರ್ಸ್ ಸಮಿತಿಯಲ್ಲಿ ಅನುಮೋದನೆಯಾಗಿ ಜಿಲ್ಲಾ ಪಂಚಾಯತಿಗಳು ಅನುಷ್ಠಾನಗೊಳಿಸಿರುವ ರಸ್ತೆ, ಮೋರಿ ಮತ್ತು ಸೇತುವೆ ಕಾಮಗಾರಿಗಳ ಬಿಲ್ಲುಗಳ ಪಾವತಿಗಾಗಿ ಪ್ರಸ್ತುತ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ-3054-80-196-1-01-300 ನಿರ್ವಹಣಾ ಅನುದಾನದಡಿ ಒದಗಿಸಿದ ಅನುದಾನದಲ್ಲಿ ಜಿಲ್ಲಾ ಪಂಚಾಯತಿಗಳಿಗೆ ರೂ.13038.73ಲಕ್ಷಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

ಆರ್ಥಿಕ ಇಲಾಖೆಯ ಆದೇಶ ಸಂ:ಎಫ್‌ಡಿ:01:ಬಿಎಫ್‌ಪಿ:2017 ದಿನಾಂಕ:5-4-2017 ರಲ್ಲಿ ಅಧಿಕಾರ ಪ್ರತ್ಯಾಯೋಜಿಸಿದಂತೆ ಪ್ರಸ್ತುತ 2017-18ನೇ ಸಾಲಿಗೆ ಟಾಸ್ಕ್‌ಪೋರ್ಸ್ ಸಮಿತಿಯಲ್ಲಿ ಅನುಮೋದನೆಯಾದ ಕಾಮಗಾರಿಗಳ ಅನುಷ್ಠಾನಕ್ಕಾಗಿ ಮೇಲೆ ಓದಲಾದ ಆದೇಶದಲ್ಲಿ ಹಂಚಿಕೆ ಮಾಡಿದ ಮೊತ್ತಕ್ಕೆ ಈಗಾಗಲೇ ಪ್ರಥಮ ಕಂತಿನಲ್ಲಿ ರೂ.3000.00ಲಕ್ಷಗಳ ಅನುದಾನವನ್ನು ಮೇಲೆ ಓದಲಾದ-2 ರಲ್ಲಿ ಬಿಡುಗಡೆ ಮಾಡಲಾಗಿರುತ್ತದೆ. ಪ್ರಸ್ತುತ ದ್ವಿತೀಯ ಕಂತಿನ ಅನುದಾನ ರೂ.3000.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿರುತ್ತದೆ.

ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:192:ಆರ್‌ಆರ್‌ಸಿ:2017, ಬೆಂಗಳೂರು, ದಿನಾಂಕ:05-09-2017**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಪ್ರಸ್ತುತ **2017-18**ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕಶೀರ್ಷಿಕೆ-3054ರಡಿ ಗ್ರಾಮೀಣ ರಸ್ತೆಗಳ ದುರಸ್ತಿ/ನಿರ್ವಹಣೆಯ ಕಾಮಗಾರಿಗಳಿಗಾಗಿ ನಿಗದಿಪಡಿಸಿ ಹಂಚಿಕೆ ಮಾಡಿದ ರೂ.13038.73ಲಕ್ಷಗಳ ಮೊತ್ತಕ್ಕೆ ಪ್ರತಿಯಾಗಿ 2ನೇ ಕಂತಿನ ಅನುದಾನ ರೂ.3000.00ಲಕ್ಷಗಳನ್ನು (ರೂಪಾಯಿಗಳು **ಮೂರು ಸಾವಿರದ ಲಕ್ಷಗಳು** ಮಾತ್ರ) ಲೆಕ್ಕ **ಶೀರ್ಷಿಕೆ-3054-80-196-1-01-300 ಲಂಪ್‌ಸಮ್** (Scheme Head-3054-00-101-0-28-200-ನಿರ್ವಹಣೆ) ರಡಿ ಅನುಬಂಧದಲ್ಲಿ ತೋರಿಸಿರುವಂತೆ ಕೆಳಕಂಡ ಷರತ್ತುಗಳಿಗೊಳಪಟ್ಟು ಜಿಲ್ಲಾ ಪಂಚಾಯತಿಗಳಿಗೆ ಪ್ರಥಮ ಕಂತಿನ ಅನುದಾನ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

ಷರತ್ತುಗಳು:

1. ಈ ಅನುದಾನವನ್ನು ಜಿಲ್ಲಾ ಪಂಚಾಯತಿಯಲ್ಲಿ ಕಳೆದ ಸಾಲಿನಲ್ಲಿ ಟಾಸ್ಕ್‌ಫೋರ್ಸ್ ಸಮಿತಿಯ ಕ್ರಿಯಾ ಯೋಜನೆಯಲ್ಲಿ ಅನುಮೋದಿಸಿ ಪೂರ್ಣಗೊಂಡು ಕಾಮಗಾರಿಗಳ ಬಾಕಿ ಬಿಲ್‌ಗಳನ್ನು ಪಾವತಿಸಲು ಪ್ರಥಮ ಆದ್ಯತೆ ನೀಡುವುದು.
2. 2017-18ನೇ ಸಾಲಿನ ಕ್ರಿಯಾಯೋಜನೆಯನ್ನು ತಯಾರಿಸುವಾಗ ನಿಗಧಿಪಡಿಸಿದ ಅನುದಾನಕ್ಕೆ ತಕ್ಕಂತೆ ಕಾಮಗಾರಿಗಳನ್ನು ಆಯ್ಕೆ ಮಾಡುವುದು, ಬಾಕಿ ಬಿಲ್‌ಗಳ ಮೊತ್ತದ

ಕಾಮಗಾರಿಗಳನ್ನು ಮುಂದುವರೆದ ಕಾಮಗಾರಿಗಳೆಂದು ಪರಿಗಣಿಸಿ ಕ್ರಿಯಾ ಯೋಜನೆಯನ್ನು ತಯಾರಿಸುವಂತಿಲ್ಲ ಮತ್ತು ಕಳೆದ ಸಾಲಿನಲ್ಲಿ ಅನುಮೋದನೆಯಾಗಿ ಆರಂಭಗೊಳ್ಳದಿರುವ ಕಾಮಗಾರಿಗಳನ್ನು ಈ ಸಾಲಿನ ಕ್ರಿಯಾಯೋಜನೆಗೆ ಹೊಸ ಕಾಮಗಾರಿಗಳಾಗಿ ಪರಿಗಣಿಸುವುದು.

3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಅನುಷ್ಠಾನಕ್ಕೆ ತಂದ ಎಲ್ಲಾ ಕಾಮಗಾರಿಗಳ ಭೌತಿಕ ಹಾಗೂ ಆರ್ಥಿಕ ವಿವರಗಳನ್ನು ಮುಖ್ಯ ಇಂಜಿನಿಯರ್, ಪಂ.ರಾಜ್.ಇಂ. ಇಲಾಖೆ ಇವರಿಗೆ ಸಲ್ಲಿಸುವಂತೆ ಎಲ್ಲಾ ಕಾರ್ಯಪಾಲಕ ಅಭಿಯಂತರುಗಳು ಕಡ್ಡಾಯವಾಗಿ ಸಲ್ಲಿಸುವಂತೆ ಸೂಚಿಸುವುದು.
4. ಲೆಕ್ಕ ಶೀರ್ಷಿಕೆ-3054ರ (ಟಾಸ್ಕ್‌ಫೋರ್ಸ್) ಕಾರ್ಯಕ್ರಮದ ಕಾಮಗಾರಿಗಳ ಗುಣಮಟ್ಟ ನಿರ್ಧರಿಸಲು ಎಲ್ಲಾ ಕಾಮಗಾರಿಗಳನ್ನು Third Party ತಪಾಸಣೆಗೆ ಒಳಪಡಿಸುವ ನಿಬಂಧನೆಗೊಳಪಡಿಸಿದ್ದು, ಅದರಂತೆ ಕಡ್ಡಾಯವಾಗಿ ಕಾಮಗಾರಿಗಳನ್ನು Third Party (SQM/DQM) ತಪಾಸಣೆಗೆ ಒಳಪಡಿಸತಕ್ಕದ್ದು.
5. ಜಿಲ್ಲಾ ಪಂಚಾಯತ್‌ಗಳು ಬಿಡುಗಡೆ ಮಾಡಿರುವ ಅನುದಾನವನ್ನು ಡ್ರಾ ಮಾಡಿ ಪೂರ್ಣವಾಗಿ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನ ವ್ಯಪಗತವಾಗದಂತೆ ನೋಡಿಕೊಳ್ಳತಕ್ಕದ್ದು. ಈ ಅನುದಾನ ನವೀಕರಣಕ್ಕೆ (Revalidation) ಯಾವುದೇ ಅವಕಾಶವಿರುವುದಿಲ್ಲ.
6. ಬಳಕೆಯಾದ ಹಣ ಹಾಗೂ ಕಾಮಗಾರಿ ಪ್ರಗತಿ ವಿವರವನ್ನು ಇಲಾಖೆಯ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ Worksoft website ನಲ್ಲಿ ಕಡ್ಡಾಯವಾಗಿ upload ಮಾಡತಕ್ಕದ್ದು.
7. 2014-15ನೇ ಸಾಲಿನಿಂದ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಅನುಮೋದನೆಗೊಂಡ ಕ್ರಿಯಾ ಯೋಜನೆಯಲ್ಲಿರುವ ಎಲ್ಲಾ ಯೋಜನೆಗಳ ಎಲ್ಲಾ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿ, ಹಣ ಪಾವತಿಯನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಿಂದ ಪಡೆಯಲಾದ ಪಾವತಿ ಆದೇಶವಿದ್ದಲ್ಲಿ ಮಾತ್ರ ಕಾಮಗಾರಿಗಳ ಬಿಲ್ಲುಗಳ ಪಾವತಿಯನ್ನು ಕಡ್ಡಾಯವಾಗಿ ಮಾಡುವಂತೆ ಹಾಗೂ ಸರ್ಕಾರದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಈಗಾಗಲೇ ಸೂಚಿಸಲಾಗಿದೆ. ಅದರಂತೆ ಟಾಸ್ಕ್‌ಫೋರ್ಸ್ ಸಮಿತಿಯ ಕಿಯಾ ಯೋಜನೆಯಲ್ಲಿ ಅನುಮೋದಿಸಿರುವ ಕಾಮಗಾರಿಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವ ನಿಬಂಧನೆಗೊಳಪಡಿಸಿದೆ.
8. ರಸ್ತೆ ಮತ್ತು ಸೇತುವೆ ನಿರ್ವಹಣಾ ಕಾಮಗಾರಿಗಳಿಗಾಗಿ ಬಿಡುಗಡೆಯಾದ ಅನುದಾನಕ್ಕೆ ಪತಿ ತ್ರೈಮಾಸಿಕ ಅವಧಿಗೆ ಅಂತ್ಯಗೊಂಡಂತೆ ಆರ್ಥಿಕ ಮತ್ತು ಭೌತಿಕ ಪ್ರಗತಿಯೊಂದಿಗೆ ಹಣ ಬಳಕೆ ಪ್ರಮಾಣ ಪತ್ರವನ್ನು ತಪ್ಪದೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂ:ಎಫ್‌ಡಿ:01:ಟಿಎಫ್‌ಪಿ:2017 ದಿನಾಂಕ: 5-4-2017 ರಲ್ಲಿ ಅಧಿಕಾರ ಪ್ರತ್ಯಾಯೋಜಿಸಿದಂತೆ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂಖ್ಯೆ: 245 : ಪಿಬಿಎಸ್ : 2017 ದಿನಾಂಕ: 17.07.2017 ರ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ. ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು:

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು
2. ಮಹಾಲೇಖಪಾಲರು (ಆಡಿಟ್-1&2) ಕರ್ನಾಟಕ, ಬೆಂಗಳೂರು

3. ಮಾನ್ಯ ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ಮುಖ್ಯ ಮಂತ್ರಿಗಳ ಕಾರ್ಯಾಲಯ, ವಿಧಾನ ಸೌಧ, ಬೆಂಗಳೂರು.
4. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ,ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಪಿಎಂಯು) (ಐಎಫ್) 5ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ವಿಶೇಷಾಧಿಕಾರಿಗಳು,(ಜಿ.ಪಂ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್. ಇಲಾಖೆ, ಬಹುಮಹಡಿ ಕಟ್ಟಡ,ಬೆಂಗಳೂರು.
11. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
12. ಉಪ ನಿರ್ದೇಶಕರು, ನೆಟ್ ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖಜಾನಾ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
13. ಅಧೀನ ಕಾರ್ಯದರ್ಶಿ, ವೆಚ್ಚ-6, ಜಿ.ಪಂ. ಆರ್ಥಿಕ ಇಲಾಖೆ, ಬೆಂಗಳೂರು.
14. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
15. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-9.
16. ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳ ಅಧೀಕ್ಷಕ ಅಭಿಯಂತರರು,
17. ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಅಭಿಯಂತರರು.
18. ಮಾಹಿತಿ ಕೇಂದ್ರಕ್ಕೆ(10 ಪ್ರತಿಗಳು)
19. ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಅನುಬಂಧ

ಲೆಕ್ಕಶೀರ್ಷಿಕೆ-3054 (ನಿರ್ವಹಣಾ ಅನುದಾನ) (ಟಾಸ್ಕ್‌ಫೋರ್ಸ್) ಅಡಿ 2017-18ನೇ ಸಾಲಿನ ಆರ್ಥಿಕ ವರ್ಷದಲ್ಲಿ ಗ್ರಾಮೀಣ ರಸ್ತೆಗಳ ನಿರ್ವಹಣೆ/ದುರಸ್ತಿಗೆ ಬಿಡುಗಡೆ ಮಾಡಿದ ದ್ವಿತೀಯ ಕಂತಿನ ಅನುದಾನ ವಿವರ.

(ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:192:ಆರ್‌ಆರ್‌ಸಿ:2017, ದಿನಾಂಕ:05-09-2017)

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆ | ಜಿಲ್ಲಾ ಪಂಚಾಯತಿಗಳಿಗೆ ತಾಲ್ಲೂಕುವಾರು ಹಂಚಿಕೆ ಮಾಡಿದ ಅನುದಾನ | ಈಗಾಗಲೇ ಬಿಡುಗಡೆ ಮಾಡಿದ ಅನುದಾನ | ಈ ಆದೇಶದಲ್ಲಿ ದ್ವಿತೀಯ ಕಂತಿನಲ್ಲಿ ಬಿಡುಗಡೆ ಮಾಡಿದ ಅನುದಾನ |
|---|---|---|---|---|
| 1 | ಬಾಗಲಕೋಟೆ | 449.00 | 100.00 | 100.00 |
| 2 | ಬೆಂಗಳೂರು (ಗ್ರಾ) | 270.13 | 100.00 | 100.00 |
| 3 | ಬೆಂಗಳೂರು (ನ) | 196.10 | 100.00 | 100.00 |
| 4 | ಬೆಳಗಾಂ | 835.56 | 100.00 | 100.00 |
| 5 | ಬಳ್ಳಾರಿ | 448.80 | 100.00 | 100.00 |
| 6 | ಬೀದರ್ | 329.30 | 100.00 | 100.00 |
| 7 | ಬಿಜಾಪುರ | 610.15 | 100.00 | 100.00 |
| 8 | ಚಾಮರಾಜನಗರ | 237.30 | 100.00 | 100.00 |
| 9 | ಚಿಕ್ಕಬಳ್ಳಾಪುರ | 316.70 | 100.00 | 100.00 |
| 10 | ಚಿಕ್ಕಮಗಳೂರು | 406.08 | 100.00 | 100.00 |
| 11 | ಚಿತ್ರದುರ್ಗ | 495.76 | 100.00 | 100.00 |
| 12 | ದಕ್ಷಿಣ ಕನ್ನಡ | 607.76 | 100.00 | 100.00 |
| 13 | ದಾವಣಗೆರೆ | 365.62 | 100.00 | 100.00 |
| 14 | ಧಾರವಾಡ | 256.46 | 100.00 | 100.00 |
| 15 | ಗದಗ | 255.38 | 100.00 | 100.00 |
| 16 | ಗುಲ್ಬರ್ಗಾ | 537.49 | 100.00 | 100.00 |
| 17 | ಹಾಸನ | 579.18 | 100.00 | 100.00 |
| 18 | ಹಾವೇರಿ | 360.57 | 100.00 | 100.00 |
| 19 | ಕೊಡಗು | 367.60 | 100.00 | 100.00 |
| 20 | ಕೋಲಾರ | 324.54 | 100.00 | 100.00 |
| 21 | ಕೊಪ್ಪಳ | 284.29 | 100.00 | 100.00 |
| 22 | ಮಂಡ್ಯ | 577.61 | 100.00 | 100.00 |
| 23 | ಮೈಸೂರು | 411.74 | 100.00 | 100.00 |
| 24 | ರಾಮನಗರ | 203.54 | 100.00 | 100.00 |
| 25 | ರಾಯಚೂರು | 392.56 | 100.00 | 100.00 |
| 26 | ಶಿವಮೊಗ್ಗ | 606.63 | 100.00 | 100.00 |
| 27 | ತುಮಕೂರು | 859.03 | 100.00 | 100.00 |
| 28 | ಉಡುಪಿ | 508.59 | 100.00 | 100.00 |
| 29 | ಉತ್ತರ ಕನ್ನಡ | 722.61 | 100.00 | 100.00 |
| 30 | ಯಾದಗಿರಿ | 222.65 | 100.00 | 100.00 |
| | ಒಟ್ಟು | 13038.73 | 3000.00 | 3000.00 |

(ಬೂಷನಹಳ್ಳಿ, ನಾಗರಾಜ್)
ನಿರ್ದೇಶಕರು
ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.